ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ, ೮೮ನೇ ಮಾರ್ಚಿ, ೧೯೫೫/ ಫಾಲ್ಗುಣ ೨೭, ೧೯೦೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಂಡಿತು.

ಶ್ರೀ ಜಿ. ಮಾದೇಗೌಡರು(ಪ್ರೋಟೆಂ ಅಧ್ಯಕ್ಷರು) ಪೀಠವನ್ನು ಅಲಂಕರಿಸಿದರು.

ಸದಸ್ಯರಿಂದ ಪ್ರಮಾಣ ವಚನ ಅಥವ ಪ್ರತಿಜ್ಞಾನವಚನ ಸ್ವೀಕಾರ

ಅಧ್ಯಕ್ಷರು.—ನೂತನವಾಗಿ ಈ ರಾಜ್ಯದ ಜನತೆಯ ಆಶೀರ್ವಾದವನ್ನು ಪಡೆದು ಈ ಮಾನ್ಯ ಸಭೆಯಂ ಸದಸ್ಯರಾಗಿರತಕ್ಕಂಥ ತಮ್ಮೆಲ್ಲರನ್ನೂ ಕೂಡ ಬಹಳ ಆತ್ಮೀಯವಾಗಿ ನಾನು ಸ್ವಾಗತಿಸುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ತಮಗೆಲ್ಲರಿಗೂ ಕೂಡ ಈ ಸಭೆಯಲ್ಲಿ ಪ್ರಮಾಣವನ್ನು ಬೋಧಿಸುವುದಕ್ಕೆ ನನ್ನನ್ನು ಮಾನ್ಯ ರಾಜ್ಯಪಾಲರು ನೇಮಕಮಾಡಿರುವುದಕ್ಕೋಸ್ಕರ ನಾನು ಮಾನ್ಯ ರಾಜ್ಯಪಾಲರಿಗೂ ಕೂಡ ಆಭಾರಿಯಾಗಿದ್ದೇನೆ. ಬಹುಶಃ ಈ ಒಂದು ಸುಯೋಗ ನನಗೆ ಲಭಿಸಿರತಕ್ಕಂಥಾದ್ದು ಈ ಮನೆಯ ಸದಸ್ಯನಾಗಿ ನಾನು ಸುಮಾರು ೨೨–೨೩ ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡಿದ ಪುಣ್ಯ ಎಂದು ಭಾವಿಸುತ್ತೇನೆ. ಈ ಒಂದು ಕೀರ್ತಿ ನನ್ನನ್ನು ಸತತವಾಗಿ ಕಳೆದ ೬ ಬಾರಿಯಿಂದ ಚುನಾಯಿಸಿಕೊಂಡು ಬಂದಿರತಕ್ಕ ನನ್ನ ಕ್ಷೇತ್ರ ಜನತೆಗೆ ಸೇರತಕ್ಕಂಥಾದ್ದು ಮತ್ತು ಅವರಿಗೆ ಸೇರತಕ್ಕ ಗೌರವ ಎಂದು ನಾನು ಭಾವಿಸುತ್ತೇನೆ. ಈ ಸಾರಿ ಎಂಟನೆಯ ವಿಧಾನಸಭೆಗೆ ಚುನಾವಣೆ ನಡೆದಿದೆ. ಈಗ ಜನತಾ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಜನತಾ ಸರ್ಕಾರ ಸ್ಥಾಪನೆಯಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ದೇಶದ ಜನತೆಗೆ ಏನಂ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅದನ್ನು ನೆರವೇರಿಸುವುದರಲ್ಲಿ ಅವರು ಪ್ರಾಮಾಣಿಕವಾಗಿ ಕೆಲಸಮಾಡಬಲ್ಲರು, ಈ ದೇಶದ ಅಭಿವೃದ್ಧಿಯನ್ನು ಒಂದು ಹೆಜ್ಜೆಯಾದರೂ ಕೂಡ ಮುಂದೆ ತೆಗೆದುಕೊಂಡು ಹೋಗಬಲ್ಲರು ಎನ್ನತಕ್ಕಂಥ ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ನೂತನವಾಗಿ ತಾವೆಲ್ಲರೂ ಕೂಡ ಎಂಟನೆಯ ವಿಧಾನಸಭೆಗೆ ಏನುಚೆನ್ನಾಯಿತರಾಗಿದ್ದೀರಿ ಈ ದಿವಸ ಈ ಸ್ಥಾನಕ್ಕೆ ಒಬ್ಬ ಅಧ್ಯಕ್ಷರನ್ನು ಚುನಾವಣೆ ಮಾಡಬೇಕಾದಂಥ ಕಾರ್ಯಕ್ರಮ ಕೂಡ ಇದೆ. ಶ್ರೀಮಾನ್ ಬಣಕಾರ್‌ರವರನ್ನು ನಾನು ಕಳೆದ ೧೦–೧೫ ವರ್ಷಗಳಿಂದ ಪತ್ರಿರದಿಂದ ನೋಡಿದ್ದೇನೆ. ಅವರು ಪಾರ್ಲಿಮೆಂಟರಿ ವ್ಯವಹಾರವನ್ನು ಚೆನ್ನಾಗಿ ಶಿಳಿದುಕೊಂಡಿರತಕ್ಕವರು. ಆಡಳಿತ ಪಕ್ಷವನ್ನು ಮತ್ತು ವಿರೋಧಪಕ್ಷವನ್ನು ಸಮನಾದ ದೃಷ್ಟಿಯಲ್ಲಿ ನೋಡಿಕೊಂಡು ಈ ಮನೆಯ ಕೀರ್ತಿಯನ್ನು, ಗೌರವವನ್ನು ಪ್ರತಿಷ್ಠೆಯನ್ನು ಅವರು ಎತ್ತಿಹಿಡಿಯುತ್ತಾರೆ ಎನ್ನುವ ನಂಬಿಕೆ ನನ್ನಲ್ಲಿದೆ. ಮುಂದೆ ಬರತಕ್ಕಂಥ ಈ ದೇಶದ ರಾಜಕೀಯ ಬದಲಾವಣೆಯಲ್ಲಿ ಅವರು ಎಷ್ಟು ವರ್ಷ ಇರಬಲ್ಲರು ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಅವರು ಈ ಸ್ಥಾನದಲ್ಲಿ ಇರತಕ್ಕಂಥ ಕಾಲದವರೆಗೆ ಈ ಮನೆಯ ಗೌರವವನ್ನು ಪ್ರತಿಷ್ಠೆಯನ್ನು ಉಳಿಸಿಕೊಂಡು ಹೋಗುತ್ತಾರೆ ಎಂಬ ನಂಬಿಕೆಯನ್ನು ನಾನು ವ್ಯಕ್ತಪಡಿಸುತ್ತೇನೆ ಈ ಸಾರಿ ಬಹಳ ಜನ ಹೊಸಬರು ಜನತೆಯ ಆಶೀರ್ವಾದದಿಂದ ಈ ಮನೆಗೆ ಪ್ರವೇಶ ಮಾಡಿದ್ದೀರಿ. ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದ ವಿಧಾನಸಭೆ ಏನಿದೆ ಇದಕ್ಕೆ ತನ್ನದೇ ಆದಂಥ ಒಂದು ವೈಶಿಷ್ಟ್ಯ ಇದೆ, ಪ್ರತಿಷ್ಠೆ ಇದೆ ಮತ್ತು ಗೌರವವನ್ನು ಪಡೆದುಕೊಂಡಿದೆ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕ ರಾಜ್ಯದಲ್ಲಿ ಹಳೇ ಮೈಸೂರಿನಲ್ಲಿ ಇಂಥಾದ್ದು ಒಂದು ಸಭೆ ಇತ್ತು. ಆ ಸಭೆಯಲ್ಲಿ ರಾಜ್ಯದ ಜನಾಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ನಡೆಯತಕ್ಕ

ಒಂದು ಕಾಲವಿತ್ತು. ಮಾದರಿ ಮೈಸೂರು ರಾಜ್ಯ ಒಂದು ಕೀರ್ತಿ ಪಡೆದಿತ್ತು. ಸ್ವಾತಂತ್ರ್ಯ ಬಂದ ಮೇಲೂ ಅನೇಕ ಹಿರಿಯರು ವಿರೋಧಪಕ್ಷದಲ್ಲಿರಲಿ ಮತ್ತು ಆಡಳಿತಪಕ್ಷದಲ್ಲಿರಲಿ ತಮ್ಮ ನಿಲುವನ್ನು ತಮ್ಮ ಧೋರಣೆಯನ್ನು ವ್ಯಕ್ತಪಡಿಸಿ, ಪ್ರಜಾಪ್ರಭುತ್ವದ ತತ್ವಗಳನ್ನು, ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪಾಶ್ಚಿಮಾತ್ಯರು ಸದನದಲ್ಲಿ ಬಂದು ಅಭ್ಯಾಸ ಮಾಡಿಕೊಂಡು ಹೋಗಿದ್ದಾರೆ. ನಮ್ಮ ಹಿರಿಯರು ಅಂತಹ ಕೀರ್ತಿಯನ್ನು ಎತ್ತಿಹಿಡಿದಿದ್ದಾರೆ. ವಿರೋಧಪಕ್ಷದವರಾಗಲಿ, ಆಡಳಿತಪಕ್ಷದವರಾಗಲಿ ಯಾರು ಈ ಸಭೆಯ ಗೌರವವನ್ನು ಕಾಪಾಡಿಕೊಂಡು, ಪ್ರಜಾಪ್ರಭುತ್ವ ಭದ್ರವಾಗಿ ನೆಲೆಸುವುದಕ್ಕೆ ಹೇಗೆ ಸೇವೆ ಮಾಡಿದರೋ ಅಂತಹವರನ್ನೂ ಕೂಡ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕಾದುದು ನಮ್ಮ ಆದ್ಯಕರ್ತವ್ಯ. ಈ ಪ್ರಜಾಪ್ರಭುತ್ವ ಸ್ಥಾಪನೆಗೋಸ್ಕರ ಪ್ರಜಾಪ್ರಭುತ್ವದ ತತ್ವಗಳನ್ನು ಎತ್ತಿಹಿಡಿಯುವುದರಲ್ಲಿ ಸರ್ವ ತ್ಯಾಗವನ್ನು ನಮ್ಮ ಹಿರಿಯರು ಮಾಡಿದ್ದಾರೆ. ಅವರ ಮಾರ್ಗದರ್ಶನ ತಮ್ಮೆಲ್ಲರಿಗೂ ಆಗಬೇಕು ಎನ್ನುವುದು ನನ್ನ ಆಸೆ. ಇಷ್ಟನ್ನು ಹೇಳಿ ಇವೊತ್ತು ತಮ್ಮೆಲ್ಲರಿಗೂ ಕೂಡ ಪ್ರಮಾಣವಚನ ಭೋಧಿಸುವುದಕ್ಕೆ ನಾನು ಸಂತೋಷಪಡುತ್ತೇನೆ. ಪ್ರಮಾಣವಚನ ಭೋಧಿಸತಕ್ಕ ವಿಷಯದಲ್ಲಿ ಕೆಲವು ನಿಯಮಗಳಿವೆ. ಆ ನಿಯಮಗಳನ್ನು ಪಾಲಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈಗಾಗಲೇ ಪ್ರಮಾಣವಚನದ ಪ್ರತಿ ಟೇಬಲ್ ಮೇಲೆ ಬಂದಿರಬೇಕು. ಆ ಪ್ರತಿಯನ್ನು ತೆಗೆದುಕೊಂಡು ಬರಬೇಕು. ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಪ್ರಮಾಣವಚನವನ್ನು ಸ್ವೀಕಾರ ಮಾಡಬೇಕು. ಆದಾದನಂತರ ಇವೊತ್ತು ಚುನಾಯಿತರಾಗಿ ಬೇಕಾದಂಥ ಶೀಯುತ ಬಿ.ಜಿ. ಬಣಕಾರ್‌ರವರು ಬರುತ್ತಾರೆ. ಆಮೇಲೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದ ಸದಸ್ಯರುಗಳ ಮತ್ತಿತರ ಮಾನ್ಯ ಸದಸ್ಯರುಗಳು ಬರಬೇಕು. ಆಲ್ಫಾಬೆಟಿಕಲ್ ಆರ್ಡರ್ ಪ್ರಕಾರ ಕಾರ್ಯದರ್ಶಿಯವರು ಹೆಸರುಗಳನ್ನು ಸೂಚಿಸುತ್ತಾರೆ. ಆಗ ಕಾರ್ಯದರ್ಶಿಯವರ ಸ್ಥಾನಕ್ಕೆ ಬಂದು ಪ್ರಮಾಣವಚನ ಸ್ವೀಕಾರ ಮಾಡಬೇಕು.

ಸದಸ್ಯರ ಹೆಸರನ್ನು ಕಾರ್ಯದರ್ಶಿಯವರು ಕರೆದಾಗ ಅವರು ತಮ್ಮ ಸ್ಥಾನವನ್ನು ಬಿಟ್ಟು ಕಾರ್ಯದರ್ಶಿಯವರ ಮೇಜಿನ ಬಲ ಭಾಗಕ್ಕೆ ಬಂದು ಸದಸ್ಯರು ಚುನಾಯಿತರಾದ ಬಗ್ಗೆ ನೀಡಿರತಕ್ಕ ಘೋಷಣಾ ಪತ್ರವನ್ನು ಕಾರ್ಯದರ್ಶಿಯವರಿಗೆ ತೋರಿಸತಕ್ಕದ್ದು. ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನದ ಪ್ರತಿ ಒಂದನ್ನು ಅವರಿಗೆ ನೀಡಲಾಗುವುದು. ಸದಸ್ಯರು ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸುವ ಸಮಯದಲ್ಲಿ ಅಧ್ಯಕ್ಷ ಪೀಠಕ್ಕೆ ಅಭಿಮುಖವಾಗಿರುವುದು. ನಂತರ ಅಧ್ಯಕ್ಷ ಸ್ಥಾನದಲ್ಲಿರುವವರ ಬಳಿಗೆ ಹೋಗಿ ಅವರಿಗೆ ಹಸ್ತಲಾಘವನ್ನು ಕೊಡುವುದು. ಆಮೇಲೆ ಸದಸ್ಯರು ಸದನದ ಅವರ ಸ್ಥಾನದಲ್ಲಿ ಕುಳಿತುಕೊಳ್ಳಲು ಅಧ್ಯಕ್ಷರು ಒಪ್ಪಿಗೆ ನೀಡುವರು. ಸದಸ್ಯರು ಅಧ್ಯಕ್ಷ ಪೀಠದ ಹಿಂಬದಿಯಿಂದ ಮೇಜಿನ ಮತ್ತೊಂದು ಭಾಗಕ್ಕೆ ಬಂದು ಆಸ್ಟಿಟ್ಟಿರುವ ಸದಸ್ಯರ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡುವುದು. ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡಿದ ನಂತರ ಸದಸ್ಯರು ಸದನದಲ್ಲಿರುವ ತಮ್ಮ ಸ್ಥಾನದಲ್ಲಿ ಕಳಿತುಕೊಳ್ಳತಕ್ಕದ್ದು. ಈಗ ಕಾರ್ಯದರ್ಶಿಯವರು ಸದಸ್ಯರ ಹೆಸರನ್ನು ಕರೆಯಬಹುದು.

ಇದಕ್ಕೆ ಮುಂಚಿತವಾಗಿ ಸಭೆಯ ಗಮನಕ್ಕೆ ಮತ್ತೊಂದು ವಿಷಯವನ್ನು ನಾನು ತರುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ದೇವೇಗೌಡರು ತಾವು ಚುನಾಯಿತರಾಗಿರತಕ್ಕ ಸಾತನೂರು ಕ್ಷೇತ್ರದ ರಾಜೀನಾಮೆ ನೀಡಿ ನನಗೆ ಪತ್ರ ಬರೆದಿದ್ದಾರೆ. ಅವರ ರಾಜಿನಾಮೆಯನ್ನು ಅಂಗೀಕರಿಸಿದ್ದೇನೆ.

ಈಗ ಕಾರ್ಯದರ್ಶಿಯವರು ಸದಸ್ಯರ ಹೆಸರನ್ನು ಕರೆಯಬಹುದು.

(ಈ ಕೆಳಗೆ ಕಾಣಿಸಿರುವಂತೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು, ಮತ್ತು ಮಾನ್ಯ ಸದಸ್ಯರುಗಳು ಪ್ರಮಾಣ ವಚನವನ್ನು ಸ್ವೀಕರಿಸಿ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡಿದ್ದರು)

ಕ್ರ. ಸಂ.	ಸದಸ್ಯರ ಹೆಸರು	ಸದಸ್ಯರ ಕ್ಷೇತ್ರ
	ತ್ರೀಯಾಂತರುಂಗಳಾದ:	
೧	ರಾಮಕೃಷ್ಣ ಹೆಗಡೆ	ಬಸವನಗುಡಿ
೨	ಬಿ. ಜಿ. ಬಣಕಾರ್	ಹಿರೇಕೇರೂರು
೩	ಬಿ. ರಾಚಯ್ಯ	ಸಂತೇಮಾರನಹಳ್ಳಿ
೪	ಹೆಚ್. ಡಿ. ದೇವೇಗೌಡ	ಹೊಳೆನರಸೀಪುರ
೫	ಜೆ. ಹೆಚ್. ಪಟೇಲ್	ಚೆನ್ನಗಿರಿ
೬	ವಿ. ಎಲ್. ಪಾಟೀಲ್	ಕಾಗವಾಡ
೭	ಎ. ಲಕ್ಷ್ಮೀಸಾಗರ್	ಚಿಕ್ಕಪೇಟೆ
೮	ಆರ್. ಎಲ್. ಜಾಲಪ್ಪ	ದೊಡ್ಡಬಳ್ಳಾಪುರ
೯	ಡಾ. ಹೆಚ್. ಎಲ್. ತಿಮ್ಮೇಗೌಡ	ಹುಣಸೂರು
೧೦	ಎ. ಎಸ್. ದೇಶಮುಖ್	ಮುದ್ದೇಬಿಹಾಳ
೧೧	ಜಿ. ಬಸವಣ್ಣಪ್ಪ	ಹೊಳೇಹೊನ್ನೂರು
೧೨	ಎಂ. ರಘುಪತಿ	ಮುಲ್ಲೇಶ್ವರಂ
೧೩	ಸಿ. ಬೈರೇಗೌಡ	ವೇಮಗಲ್
೧೪	ಬಿ. ಎ. ಜೀವಿಜಯ	ಸೋಮವಾರಪೇಟೆ
೧೫	ಎಂ. ಪಿ. ಪ್ರಕಾಶ್	ಹಡಗಲಿ
೧೬	ಪಿ. ಜಿ. ಆರ್. ಸಿಂಧ್ಯ	ಕನಕಪುರ
೧೭	ಡಾ. ಜೀವರಾಜ ಆಳ್ವ	ಜಯಮಹಲ್
೧೮	ಜೆಗಜಿನಗಿ ರಮೇಶ್ ಚಂದಪ್ಪ	ಬಳ್ಳಾಳ್ಳಿ
೧೯	ಬಿ. ಆರ್. ಯಾವಗಲ್	ನರಗುಂದ
೨೦	ಸಿದ್ದರಾಮಯ್ಯ	ಚಾಮುಂಡೇಶ್ವರಿ
೨೧	ಬಿ. ಆರ್. ಇನಾಂದಾರ್	ಕಿತ್ತೂರು
೨೨	ಬಿ. ಸೋಮಶೇಖರ್	ಮಳವಳ್ಳಿ
೨೩	ವೈ. ಕೆ. ರಾಮಯ್ಯ	ಕುಣಿಗಲ್
೨೪	ಹೆಚ್. ಜಿ. ಗೋವಿಂದೇಗೌಡ	ಶೃಂಗೇರಿ
೨೫	ವೀರಣ್ಣ	ಕೊರಟಗೆರೆ
೨೬	ಆರ್. ವಿ. ದೇಶಪಾಂಡೆ	ಹಳಿಯಾಳ
೨೭	ಬಸವರಾಜ ಪಾಟೀಲ್ ಅನ್ವರಿ	ಮಾನ್ವಿ

೨೮	ಡಾ. ಎ. ಪುಷ್ಪಾವತಿ	ದೇವದುರ್ಗ
೨೯	ಅಗಡಿ ವಿರೂಪಾಕ್ಷಪ್ಪ ಸಂಗಣ್ಣ	ಕೊಪ್ಪಳ್
೩೦	ಅಜ್ಜೀಬಾಳ ಜೆ. ಎಸ್. ಹೆಗಡೆ	ಅಂಕೋಲ
೩೧	ಅದ್ಯಾಂತಯ್ಯ ಎನ್. ಎಂ.	ಸೂರತ್ಕಲ್
೩೨	ಅಪ್ಪಾಜಿಗೌಡ ಬಿ.	ವಂದ್ಲೂರು
೩೩	ಅಮರನಾಥ ಶೆಟ್ಟಿ ಕೆ.	ಮೂಡಬಿದರೆ
೩೪	ಅಶ್ವತ್ಥರೆಡ್ಡಿ ಜಿ. ಹೆಚ್.	ಜಗಳೂರು
೩೫	ಆಚಾರ್ ಜಿ. ಎಸ್.	ಬೈಂದೂರು
೩೬	ಇದಿನಬ್ಬ ಬಿ. ಎಂ.	ಉಳ್ಳಾಲ
೩೭	ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ	ಹಾನಗಲ್
೩೮	ಉಪ್ಪಿನ ಬಸಪ್ಪ ಅಂದಾನಪ್ಪ	ಕುಂದಗೋಳ್
೩೯	ಉಮರಬ್ಬ ಬಿ. ಎ.	ವಿಠ್ಠಲ್
೪೦	ಉಸ್ತಾದ್ ಮಂಹಿಬೂಬ್ ಪಟೇಲ್ ರಾಡ್ಲಿ ಪಟೇಲ್	ಬಿಜಾಪುರ
೪೧	ಏಕಾಂತಯ್ಯ ಹೆಚ್.	ಚಿತ್ರದುರ್ಗ
೪೨	ಓಂಕಾರಮೂರ್ತಿ ಪಿ. ಬಿ.	ಕಡೂರು
೪೩	ಕಟ್ಟಿ ವಿಶ್ವನಾಥ ಮಲ್ಲಪ್ಪ	ಚಿತಾಪುರ
೪೪	ಕರೀಗೌಡ ಬಿ. ವಿ.	ಹಾಸನ
೪೫	ಕಣ್ಣನ್ ಸಿ.	ಶಾಂತಿನಗರ
೪೬	ಕಲ್ಯಾಣರಾವ್ ಸಂಗಪ್ಪ ಮೊಲಕೇರಿ	ಭಾಲ್ಕಿ
೪೭	ಕುಲಕೋಟಿ ಚಿತ್ತರಂಜನ್ ಚನ್ನಬಸಪ್ಪ	ಹಾವೇರಿ
೪೮	ಕಾನಡೆ ಗೋಪಾಲ ಮುಂಕುಂದ	ಸಿರಸಿ
೪೯	ಕುಮಾರಸ್ವಾಮಿ ಹೆಚ್. ಕೆ.	ಬೇಲೂರು
೫೦	ಕುಶಾಲ ಸಿ.	ಸುಳ್ಯ
೫೧	ಕುಲಕರ್ಣಿ ಎಂ. ಕೆ.	ನವಲಗುಂದ
೫೨	ಕೇಶವಮೂರ್ತಿ ಎಂ. ಪಿ.	ಆನೇಕಲ್
೫೩	ಕೇಡ್ ನಿಂಗಪ್ಪ ಸಿದ್ದಪ್ಪ	ಇಂಡಿ
೫೪	ಕೊಟ್ರಪ್ಪ ಬಿ. ಜಿ.	ಹರಿಹರ
೫೫	ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ	ರಾಣೇಬೆನ್ನೂರು
೫೬	ಕೌಜಲಗಿ ಶಿವಾನಂದ, ಹೇಮಪ್ಪ	ಬೈಲಹೊಂಗಲ್
೫೭	ಕೃಷ್ಣ	ಕೃಷ್ಣರಾಜಪೇಟೆ
೫೮	ಕೃಷ್ಣಪ್ಪ ಎ.	ವರ್ತೂರು
೫೯	ಕೃಷ್ಣಪ್ಪ ಹೆಚ್. ಟಿ.	ನಾಗಮಂಗಲ
೬೦	ಕೃಷ್ಣಮೂರ್ತಿ	ಕಲಮಲ
೬೧	ಕೃಷ್ಣರೆಡ್ಡಿ ಕೆ. ಎಂ.	ಚಿಂತಾಮಣಿ

(ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ವಿಧಾನ ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

೬೨	ಕಾಂತಾ ಎಸ್. ಕೆ.	ಗುಲ್ಬರ್ಗ
೬೩	ಕೆಂಪೇಗೌಡ ಕೆ.	ಪಾಂಡವಪುರ
೬೪	ಕೆಂಪೀರೆಗೌಡ ಕೆ.	ಚಾಮರಾಜ
೬೫	ಗುರುಪಾದಪ್ಪ ನಾಗರಪಲ್ಲಿ	ಔರಾದ್
೬೬	ಗುರುಪ್ರಸಾದ್ ಬಿ.	ನೆಲಮಂಗಲ
೬೭	ಗೌಡ ಬಿ. ಎಲ್.	ಕಳ್ಳಂಬೆಳ್ಳ
೬೮	ಗೌಡ ಎನ್. ಹೆಚ್.	ಕುಮಟ
೬೯	ಗಂಗಾಧರ ಎನ್.	ಶ್ರವಣಬೆಳಗೊಳ
೭೦	ಗಂಗಾಧರಪ್ಪ ಡಿ. ಬಿ.	ಅರಸೀಕೆರೆ
೭೧	ಘವರಿ ಮಾರುತಿ ಗಂಗಪ್ಪ	ರಾಯಬಾಗ್
೭೨	ಚನ್ನಪ್ಪ ಹೆಚ್. ಜಿ.	ಮಾಗಡಿ
೭೩	ಚಿನ್ನಪ್ಪ ಎ.	ಬೇತಮಂಗಲ
೭೪	ಚಿಣ್ಣಪ್ಪ ಡಿ. ಎ.	ಮಡಕೇರಿ
೭೫	ಚೌಡಯ್ಯ ಹೆಚ್. ಡಿ.	ಕೆರಗೋಡು
೭೬	ಶ್ರೀಮತಿ ಶಕುಂತಲ ತಂಕರಾಂ ಚಳಗುಲೆ	ಚಿಕ್ಕೋಡಿ
೭೭	ಚಂದ್ರಶೇಖರಯ್ಯ ಬಿ. ಎಸ್.	ತಿಪಟೂರು
೭೮	ಚಂದ್ರಶೇಖರ ಎಂ.	ಜಯನಗರ
೭೯	ಚಂದ್ರಶೇಖರಪ್ಪ ಮಲ್ಲಿಕಾರ್ಜುನ ಮಾವಿನ	ಪರಸಗಡ್
೮೦	ಚಂದ್ರಶೇಖರ	ಗೌರಿಬಿದನೂರು
೮೧	ಚಂದ್ರಶೇಖರ ರೆಡ್ಡಿ ದೇಶಮುಖ್ ಪಾಂಡ್ಲ	ಸೇಡಂ
೮೨	ಜವಳಿಂಡಿ ಭೀಮಪ್ಪ ಗಂಗಪ್ಪ	ಮುಧೋಳ್
೮೩	ಜಯಕುಮಾರ್ ಡಿ. ಟಿ.	ನಂಜನಗೂಡು
೮೪	ಜಯರಾಮ್ ಎಸ್. ಡಿ.	ಮಂಡ್ಯ
೮೫	ಜಾರ್ಜ್ ಕೆ. ಜೆ.	ಭಾರತಿನಗರ
೮೬	ಡಾ. ತಿಪ್ಪೇಸ್ವಾಮಿ ಬಿ. ಎ.	ಭರಮಸಾಗರ
೮೭	ತಿಪ್ಪೇಸ್ವಾಮಿ	ಚಳ್ಳಕೆರೆ
೮೮	ಧರ್ಮಪ್ಪ ಬಿ.	ಸಾಗರ
೮೯	ಧರ್ಮಸಿಂಗ್ ನಾರಾಯಣಸಿಂಗ್	ಜೇವರಗಿ
೯೦	ದ್ಯಾವೇರಪ್ಪ ಹೆಚ್. ಬಿ.	ಮಾಲೂರು
೯೧	ದೇಸಾಯಿ ಅಯ್ಯಪ್ಪ ಬಸವರಾಜ್	ಧಾರವಾಡ್ (ಗ್ರಾಮಾಂತರ)
೯೨	ದೇಸಾಯಿ ರಾವ್ ಸಾಹೆಬ್ ತುಳಸಿಗೇರಪ್ಪ	ಬಾದಾಮಿ
೯೩	ದೇಸಾಯಿ ಶಿವಪತ್ರಪ್ಪ ಮಾಡಿವಾಳಪ್ಪ	ಹೂವಿನಹಿಪ್ಪರಗಿ

೯೪	ದೊಡ್ಡಮೇಟಿ ಜ್ಞಾನದೇವ ಶಿವನಾಗಪ್ಪ	ರೋಣ್
೯೫	ನಂಜಪ್ಪ ಎಸ್.	ಕೃಷ್ಣರಾಜನಗರ
೯೬	ನಂಜೇಗೌಡ ಈ.	ಗಂಡಸಿ
೯೭	ನಂಜಯ್ಯಮಠ ಶಂಕರಯ್ಯ ಗದಿಗಯ್ಯ	ಗುಳೇದಗುಡ್ಡ
೯೮	ಶ್ರೀಮತಿ ನಾಗರತ್ನಮ್ಮ ಕೆ. ಎಸ್.	ಗುಂಡ್ಲುಪೇಟೆ
೯೯	ನಾಗರಾಜಯ್ಯ ಡಿ.	ಹುಲಿಯೂರು ದುರ್ಗ
೧೦೦	ಜಿ. ನಾರಾಯಣಕುಮಾರ್	ಬಿನ್ನಿಪೇಟೆ
೧೦೧	ನಾರಾಯಣಪ್ಪ ಆರ್.	ಸಿಂಧನೂರು
೧೦೨	ನಾರಾಯಣರಾವ್ ಎಂ. ಎಸ್.	ಗಾಂಧಿನಗರ
೧೦೩	ಡಾ. ಬಿ. ನಾರಾಯಣಸ್ವಾಮಿ	ಬಾಗೇಪಲ್ಲಿ
೧೦೪	ಬಿ. ಆರ್. ನೀಲಕಂಠಪ್ಪ	ತರೀಕೆರೆ
೧೦೫	ನಿಂಗಯ್ಯ ಬಿ. ಬಿ.	ವಂಡಿಗೆರೆ
೧೦೬	ಪಟಮಕ್ಕಿ ರತ್ನಾಕರ	ತೀರ್ಥಹಳ್ಳಿ
೧೦೭	ಪ್ರತಾಪಚಂದ್ರಶೆಟ್ಟಿ	ಕುಂದಾಪುರ
೧೦೮	ಪಾಟೀಲ್ ಕೆ. ಎಚ್.	ಗದಗ
೧೦೯	ಪಾಟೀಲ್ ಬಸವಂತ ಐರೋಜಿ	ಉಚ್ಚಗಾಂ
೧೧೦	ಪಾಟೀಲ್ ಮಲ್ಲಾರಗೌಡ ಶಂಕರಗೌಡ	ಸಂಕೇಶ್ವರ
೧೧೧	ಪಾಟೀಲ್ ವೀರಕುಮಾರ್ ಅಪ್ಪಾಸೊ	ನಿಪ್ಪಾಣಿ
೧೧೨	ಪಾಟೀಲ್ ಎಂ. ಎಸ್.	ಕುಷ್ಟಗಿ
೧೧೩	ಪಾಟೀಲ್ ಕುಮಾರಗೌಡ ಅಡವೆಪ್ಪಗೌಡ	ಬಸವನ ಬಾಗೇವಾಡಿ
೧೧೪	ಪಾಟೀಲ್ ವಸಂತರಾವ್ ಪರಶರಾಮ್	ಖಾನಾಪುರ
೧೧೫	ಪುಟ್ಟಸ್ವಾಮಿ ಎಸ್.	ಚಾಮರಾಜನಗರ
೧೧೬	ಪುಟ್ಟಸ್ವಾಮಿಗೌಡ	ರಾಮನಗರಂ
೧೧೭	ಪೂರ್ಣ ಮುತ್ತಪ್ಪ	ಮೊಳಕಾಲ್ಮೂರು
೧೧೮	ಪಂಪಾಪತಿ	ದಾವಣಗೆರೆ
೧೧೯	ಬಸವರಾಜ್	ಬ್ರಹ್ಮಾವರ
೧೨೦	ಬಸವರಾಜು ಡಿ. ಬಿ.	ಸಕಲೇಶಪುರ
೧೨೧	ಬಸವರಾಜ್ ಪಾಟೀಲ್ ಶಿವ್ಮನಗೌಡ	ಮಾಸ್ಕಿ
೧೨೨	ಬಸವರಾಜ್ ರಾಯರೆಡ್ಡಿ	ಎಲ್ಬುರ್ಗ
೧೨೩	ಬಸವರಾಜ್ ಹಾದಗಪ್ಪ ಪಾಟೀಲ್	ಹುಮ್ನಾಬಾದ್
೧೨೪	ಬಸವಯ್ಯ ಬಿ.	ಕೊಳ್ಳೇಗಾಲ
೧೨೫	ಬಸವನಗೌಡ ಡಿ. ಜಿ.	ಹೊನ್ನಾಳಿ
೧೨೬	ಬಸವಲಿಂಗಪ್ಪ ಬಿ.	ಯಲಹಂಕ
೧೨೭	ಬಾಬೂರೆಡ್ಡಿ ವಿ. ಶಂಗಲ್	ಬೀಗಿ
೧೨೮	ಬಾಗಲಕೋಟೆ ಗುರುಪಾದ ಶಿವಪ್ಪ	ಜಮಖಂಡಿ

೧೨೯	ಬಾಚೇಗೌಡ ಬಿ. ಎನ್.	ಹೊಸಕೋಟೆ
೧೩೦	ಬಾಲಿಕಾಯಿ ತಿಮ್ಮಣ್ಣ ಬಸವಣ್ಣಪ್ಪ	ಶಿರಹಟ್ಟಿ
೧೩೧	ಬಾಸ್ಕರಪ್ಪ ಸಿ. ಎನ್.	ಬೆಳ್ಳಾವಿ
೧೩೨	ಬಿರಾದಾರ್ ಮಲ್ಲನಗೌಡ ದೌಲತ್‌ರಾಯ್	ಸಿಂಧಗಿ
೧೩೩	ಬಿಳಗಿ ಕೆ. ಎಸ್.	ಬ್ಯಾಡಗಿ
೧೩೪	ಭೀಮಸೇನಿ ಕೊಂಡಯ್ಯ	ಹೊಸಪೇಟೆ
೧೩೫	ಭೂಪತಿ ಯು.	ಸಂಡೂರು
೧೩೬	ಬೊಮ್ಮಣ್ಣ ಎನ್. ಟಿ.	ಕೂಡಲಗಿ
೧೩೭	ಬೊಮ್ಮಾಯಿ ಎಸ್. ಆರ್.	ಹುಬ್ಬಳ್ಳಿ (ಗ್ರಾಮಾಂತರ)
೧೩೮	ಬೆಲ್ಲದ ಚಂದ್ರಕಾಂತ ಗುರುಪ್ಪ	ಧಾರವಾಡ
೧೩೯	ಬ್ಲೇಸಿಯಸ್, ಎಂ. ಡಿ. ಸೌಜ	ವಂಗಳೂರು
೧೪೦	ಬಂಗಾರಪ್ಪ ಎಸ್.	ಸೊರಬ
೧೪೧	ಬಂಡಿ ಸಿದ್ದೇಗೌಡ ಎ. ಎಸ್.	ಶ್ರೀರಂಗಪಟ್ಟಣ
೧೪೨	ಮದನಗೋಪಾಲ ನಾಯಂಕ್	ಶೋರಾಪುರ
೧೪೩	ಮಣಿ ಟಿ. ಎಸ್.	ಕೆ. ಜಿ. ಎಫ್.
೧೪೪	ಶ್ರೀಮತಿ ಮನೋರಮಾ ಮಧ್ವರಾಜ	ಉಡುಪಿ
೧೪೫	ಮಲ್ಲಪ್ಪ ಕೆ.	ಮಾಯಕೊಂಡ
೧೪೬	ಮಲ್ಲಿಕಾರ್ಜುನ ಖಾರ್ಗೆ	ಗುರುಮಿಟ್‌ಕಲ್
೧೪೭	ಗಾಲಿ ಮಹಾದೇವಪ್ಪ	ಗಂಗಾವತಿ
೧೪೮	ಮಾನೆ ರಾಜಾಬಾಹು ಶಂಕರರಾವ್	ಬೆಳಗಾಂವಿ
೧೪೯	ಮಹಾದೇವಪ್ಪ ಹೆಚ್. ಸಿ.	ಟಿ. ನರಸೀಪುರ
೧೫೦	ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್	ಅಫಜಲ್‌ಪುರ
೧೫೧	ಮಾಳಗಿ ಶಿವಪುತ್ರಪ್ಪ ಚನ್ನಬಸವಪ್ಪ	ಬಾಗೇವಾಡಿ
೧೫೨	ಕಾಳಪ್ಪ ಪರಿಸ ಮಂಗೇನ್ನವರ್	ಸದಲ್ಗ
೧೫೩	ಶ್ರೀ ಮತಿ ಮಂಕ್ತರ್ ಉನ್ನೀಸ್	ನರಸಿಂಹರಾಜ್
೧೫೪	ಮುತ್ತಣ್ಣವರ್ ಮಲ್ಲಪ್ಪ ಲಕ್ಷ್ಮಣ	ಗೋಕಾಕ್
೧೫೫	ಮುನಿಯಪ್ಪ ಕೆ. ಎಂ.	ಚಿಕ್ಕಬಳ್ಳಾಪುರ
೧೫೬	ಮುನಿಸ್ವಾಮಪ್ಪ ಎಸ್.	ಶಿಡ್ಲಘಟ್ಟ
೧೫೭	ಮುನಿಸ್ವಾಮಯ್ಯ ಪಿ. ಸಿ.	ದೇವನಹಳ್ಳಿ
೧೫೮	ಮೂಡಲಗಿರಿಯಪ್ಪ ಸಿ. ಪಿ.	ತಿರಾ
೧೫೯	ಮಹಮದ್ ಮೊಹಿನುದ್ದೀನ್	ಚಾಮರಾಜಪೇಟೆ
೧೬೦	ಮಹಮದ್ ಒವೈಸ್ ಅಬ್ದುಲ್ ರಹಿಮಾನ್	ರಾಯಚೂರು
೧೬೧	ಮಹಮದ್ ಲೈರುದ್ದೀನ್ ಬುರಾನುದ್ದೀನ್	ಬೀದರ್
೧೬೨	ಮಂಜುನಾಥ್ ಜೆ. ಸಿ.	ಹೊಳಲ್‌ಕೆರೆ

೧೬೩	ವಂಟೂರ್ ಗೂಳಪ್ಪ ವೆಂಕಪ್ಪ	ಬಾಗಲಕೋಟೆ
೧೬೪	ಯಡಿಯೂರಪ್ಪ ಬಿ. ಎಸ್.	ಶಿಕಾರಿಪುರ
೧೬೫	ಯಂಕಾನಾಯಕ್ ಬಿ. ಹೆಚ್.	ಹರಪನಹಳ್ಳಿ
೧೬೬	ರಮೇಶ್ ಕುಮಾರ್	ಶ್ರೀನಿವಾಸಪುರ
೧೬೭	ರವೀಂದ್ರನಾಥ್ ಬಾಬು ಕೆ. ವಿ.	ಕೊಟ್ಟೂರು
೧೬೮	ರಾಣಿ ಪ್ರಭಾಕರ್ ಸದಾಶಿವ	ಕಾರವಾರ
೧೬೯	ರಾಮಕೃಷ್ಣ ಜಿ.	ಕಮಂಲಪುರ
೧೭೦	ರಾಮಕೃಷ್ಣಯ್ಯ ಕೆ. ಹೆಚ್.	ತುರುವೇಕೆರೆ
೧೭೧	ರಾಮದಾಸ್ ಜಿ.	ಹೊಸದುರ್ಗ
೧೭೨	ರಾಮನಾಥ ರಾಯ್	ಬಂಟವಾಳ
೧೭೩	ರಾಮನಾರಾಯಣ್ ನಾಯಕ್	ಭಟ್ಕಳ್
೧೭೪	ರಾಮಪ್ಪ ಎಂ.	ಬಳ್ಳಾರಿ
೧೭೫	ರಾಮಪ್ಪ ಮಲ್ಲಪ್ಪ ಪಾಟೀಲ್	ಅರಭಾವಿ
೧೭೬	ರಾಮಯ್ಯ ಆರ್.	ಹಿರಿಯೂರು
೧೭೭	ರಾಮಸ್ವಾಮಿ ಕೆ. ಜಿ.	ಬನ್ನೂರು
೧೭೮	ರಾಜವರ್ಧನ್	ವಂಧುಗಿರಿ
೧೭೯	ರಾಜಾ ಅಮರಪ್ಪ ನಾಯಕ್	ಲಿಂಗಸುಗೂರು
೧೮೦	ರಾಜುಗೌಡ ಜಿ.	ಹನೂರು
೧೮೧	ರೋವಣ್ಣ ಸಿದ್ದಯ್ಯ ಸಿ. ಎಂ.	ಸಿರಗಂಪ್ಪ
೧೮೨	ರೋಷನ್ ಬೇಗ್ ಆರ್.	ಶಿವಾಜಿನಗರ
೧೮೩	ಲಕ್ಕಪ್ಪ ಬಿ.	ಚಿಕ್ಕನಾಯಕನಹಳ್ಳಿ
೧೮೪	ಲಕ್ಷ್ಮೀನರಸಿಂಹಯ್ಯ	ತಾಮಕೂರು
೧೮೫	ಲಕ್ಷ್ಮಯ್ಯ ಎಸ್. ಆರ್.	ಬೀರೂರು
೧೮೬	ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್	ಅಥಣಿ
೧೮೭	ವರದೇಗೌಡ ಎಂ.	ಚೆನ್ನಪಟ್ಟಣ
೧೮೮	ವಸಂತ ವಿ. ಸಾಲಿಯಾನ್	ಕಾಪು
೧೮೯	ವಸಂತ ಬಂಗೇರಾ ಕೆ.	ಬೆಳ್ತಂಗಡಿ
೧೯೦	ವಿನಯಕುಮಾರ್ ಸೊರ್ಕೆ	ಪುತ್ತೂರು
೧೯೧	ವೀರಪ್ಪ ಮೊಯ್ಲಿ ಎಂ.	ಕಾರ್ಕಳ
೧೯೨	ವಿಶ್ವನಾಥ ಪಾಟೀಲ್ ಹೆಬ್ಬಾಳ್	ಚಿತ್ತಾಪುರ
೧೯೩	ವಿಶ್ವನಾಥ ರೆಡ್ಡಿ ಮುದ್ನಾಳ್	ಯಾದಗಿರಿ
೧೯೪	ವೇದಾಂತ ಹೆಮ್ಮಿಗೆ	ಕೃಷ್ಣರಾಜ
೧೯೫	ವೀರಯ್ಯ ಸ್ವಾಮಿ, ಮಹಾಲಿಂಗಯ್ಯ	ಚಿಂಚೋಳಿ
೧೯೬	ಶ್ರೀ ಆರ್. ವೆಂಕಟರಾಮಯ್ಯ	ಮಾಳಬಾಗಿಲು

೧೯೭	ಶ್ರೀ ಕೆ. ವೆಂಕಟೇಶ್	ಪಿರಿಯಾಪಟ್ಟಣ
೧೯೮	ಶ್ರೀ ಶರಣಬಸಪ್ಪ ಮಾಲಿ ಪಾಟೀಲ್	ಆಲಂದ್
೧೯೯	ಶ್ರೀ ಶಾಣಪ್ಪ ಕೆ. ಬಿ.	ಷಹಬಾದ್
೨೦೦	ಶ್ರೀಮತಿ ಶಿವಕಾಂತ ಚತುರೆ	ಹುಲಸೂರ್
೨೦೧	ಶ್ರೀ ಎಸ್ ಶಿವನಂಜಪ್ಪ	ಗುಬ್ಬಿ
೨೦೨	ಶ್ರೀ ಶಿವಶೇಖರಪ್ಪಗೌಡ ಸಿರವಾಲ್	ಸಂಕೇಶ್ವರ
೨೦೩	ಶ್ರೀ ಎಂ. ಶಿವಣ್ಣ	ಹೆಗ್ಗಡದೇವನಕೋಟೆ
೨೦೪	ಶ್ರೀ ಶಿವರಾಮರೆಡ್ಡಿ ಬಿ.	ಕಾರುಗೋಡು
೨೦೫	ಶ್ರೀ ಕೆ. ಎಚ್. ಶ್ರೀನಿವಾಸ್	ಶಿವಮೊಗ್ಗ
೨೦೬	ಶ್ರೀ ಎಂ. ಶ್ರೀನಿವಾಸ್	ಉತ್ತರಹಳ್ಳಿ

ಪ್ರೊಟಂ. ಅಧ್ಯಕ್ಷರು.—(ಶ್ರೀ ಜಿ. ಮಾದೇಗೌಡರು ಅಧ್ಯಕ್ಷ ಪೀಠವನ್ನಲಂಕರಿಸಿದರು)

೨೦೭	ಶ್ರೀ ಕೆ. ಆರ್. ಶ್ರೀನಿವಾಸಯ್ಯ	ಕೋಲಾರ
೨೦೮	ಶ್ರೀ ಶ್ರೀರಂಗದೇವರಾಯಲು	ಕನಕಗಿರಿ
೨೦೯	ಶ್ರೀ ಐ. ಬಿ. ಶಂಕರ್	ಚಿಕ್ಕಮಂಗಳೂರು
೨೧೦	ಶ್ರೀ ಸಾಲೇರ್ ಎಸ್. ಸಿದ್ದಪ್ಪ	ಭದ್ರಾವತಿ
೨೧೧	ಶ್ರೀ ಪಿ. ಸಿ. ಸಿದ್ದನಗೌಡರ್	ಕಲಘಟಗಿ
೨೧೨	ಶ್ರೀ ಬಿ. ಸ್ವಾಮಿರಾವ್	ಹೊಸನಗರ
೨೧೩	ಶ್ರೀಮತಿ ಸುಮಾ ವಸಂತ	ವಿರಾಜಪೇಟೆ
೨೧೪	ಶ್ರೀ ಹೋಮ್ಲಾ ನಾಯಕ್	ಪಾವಗಡ
೨೧೫	ಶ್ರೀ ಹಿರೇರೆಡ್ಡಿ ಬಸವಂತಪ್ಪ ಬಸಪ್ಪ	ರಾಮದುರ್ಗ
೨೧೬	ಶ್ರೀ ಹುಂಬಾರೆಡ್ಡಿ ನಾಗಪ್ಪ ಶಿವಲಿಂಗಪ್ಪ	ಮುಂಡರಗಿ
೨೧೭	ಶ್ರೀ ಹಿಂಡಸಗೇರಿ ಅಬ್ದುಲ್ ಹಕೀದರ್ ಮೊಹಮದ್ ಗೌಸ್	ಹುಬ್ಬಳ್ಳಿ

ಅಧ್ಯಕ್ಷರು.—ಈಗ ಯಾರಾದರೂ ಮಾನ್ಯ ಸದಸ್ಯರು ಪ್ರಮಾಣವಚನ ಸ್ವೀಕಾರ ಮಾಡದೇ ಇರುವವರು ಪ್ರಮಾಣವಚನ ಸ್ವೀಕಾರ ಮಾಡಬಹುದು.

೨೧೮	ಶ್ರೀ ಕಟ್ಟಿ ವಿಶ್ವನಾಥ ಮಲ್ಲಪ್ಪ	ಹುಕ್ಕೇರಿ
೨೧೯	ಶ್ರೀ ಕೆ. ಬಿ. ಮಲ್ಲಪ್ಪ	ಅರಕಲಗೂಡು
೨೨೦	ಶ್ರೀ ಕಡಪಟ್ಟಿ ಶಿವಸಂಗಪ್ಪ ಸಿದ್ದಪ್ಪ	ಹಾನಗುಂದ್
೨೨೧	ಶ್ರೀ ನೀಲಕಂಠನಗೌಡ ವೀರನಗೌಡ ಪಾಟೀಲ್	ಶಿಗ್ಗಾಂವ್

ಹಂಗಾವಿ ಅಧ್ಯಕ್ಷರಂ.—ಪ್ರಾಮುಖ್ಯವಾದ ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಶ್ರೀಮಾನ್ ಎಸ್. ಬಂಗಾರಪ್ಪ ಅವರನ್ನು ಕರ್ನಾಟಕ ಪ್ರದೇಶ್ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದೇವೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಪಕ್ಷದ ವತಿಯಿಂದ ಪತ್ರ ಬಂದಿದೆ. ಈ ಸಭೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ೬೬ ಮಂದಿ ಸಂಖ್ಯಾ ಬಲವನ್ನು ಹೊಂದಿದ್ದಾರೆ. ಆದ್ದರಿಂದ ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷ ವಿರೋಧಪಕ್ಷವೆಂದೂ, ಶ್ರೀ ಎಸ್. ಬಂಗಾರಪ್ಪ ಅವರನ್ನು ವಿರೋಧಪಕ್ಷದ ನಾಯಕರೆಂದೂ ಮನ್ನಣೆ ನೀಡಿದ್ದೇನೆ.

ಅಧ್ಯಕ್ಷರವರ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಮಾನ್ಯ ಶ್ರೀ ಬಿ. ಜಿ. ಬಣಕಾರ್ ಅವರ ಹೆಸರನ್ನು ಸೂಚಿಸಿ ಎರಡು ಪ್ರಸ್ತಾಪಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎರಡೂ ಪ್ರಸ್ತಾವಗಳನ್ನೂ ಸೂಚಿಸಿ ಅವುಗಳನ್ನು ಅನುಮೋದಿಸಿದ ನಂತರ, ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದಲ್ಲಿ ಎರಡನೆಯ ಪ್ರಸ್ತಾವವನ್ನು ಮತಕ್ಕೆ ಹಾಕಲಾಗುವುದಿಲ್ಲ.

ಈಗ ಶ್ರೀ ರಾಮಕೃಷ್ಣ ಹೆಗಡೆಯವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಕೋರಿ ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಬಿ. ರಾಚಯ್ಯ ಅವರನ್ನು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ''ಮಾನ್ಯ ಬಿ. ಜಿ. ಬಣಕಾರ್ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.''

ಶ್ರೀ ಬಿ. ರಾಚಯ್ಯ.—ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಮಂಡಿಸಲಾಯಿತು)

ಈಗ ಶ್ರೀ ಹೆಚ್. ಡಿ. ದೇವೇಗೌಡ ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಅವರನ್ನು ಕೋರಿ, ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಜೆ. ಎಚ್. ಪಟೇಲರವರನ್ನು ಕೋರುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ''ಮಾನ್ಯ ಬಿ. ಜಿ. ಬಣಕಾರ್ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.''

ಶ್ರೀ ಜೆ. ಎಚ್. ಪಟೇಲ್.—ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಮಂಡಿಸಲಾಯಿತು)

ಅಧ್ಯಕ್ಷರು.—ಈಗ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರತಕ್ಕ ಮೊದಲನೆಯ ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕುತ್ತೇನೆ,

ಪ್ರಸ್ತಾವನೆ ಹೀಗಿದೆ.—''ಶ್ರೀ ಬಿ. ಜಿ. ಬಣಕಾರ್ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.''

(ಪ್ರಸ್ತಾವನೆಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರು.—ಈ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿರುವುದರಿಂದ ಎರಡನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕಬೇಕಾಗಿಲ್ಲ.

ಶ್ರೀ ಬಿ. ಜಿ. ಬಣಕಾರ್ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ ಅವರನ್ನು ಸೂಚಕರಾದ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ಅನುಮೋದಕರಾದ ಶ್ರೀ ರಾಚಯ್ಯ ಅವರು ಅಧ್ಯಕ್ಷಪೀಠಕ್ಕೆ ಕರೆತರಬೇಕೆಂದು ಕೋರುತ್ತೇನೆ.